ಕೊನೆಯದಾಗಿ ಶ್ರೀ ಯಶವಂತ ವಿಠೋಬ ಚಿತ್ತಾಲರವರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಸರ್ಕಾರಗಳು ಅನೇಕ ಯೋಜನೆಗಳನ್ನು ತರುತ್ತದೆ. ಒಬ್ಬ ಸಾಹಿತಿ ಹೇಗೆ ಸಾಮಾಜಿಕ ಚಿಂತನೆಯನ್ನು ಮಾಡಬಹುದು ಎಂಬುದಕ್ಕೆ ಶ್ರೀಯುತ ಯಶವಂತ ವಿಠೋಬ ಚಿತ್ತಾಲರವರ ಕಾದಂಬರಿಗಳು ಬಹಳ ಮುಖ್ಯವಾಗಿವೆ. ಏಕೆಂದರೆ, ಈಗ ಹೆಚ್ಚು ಹೆಚ್ಚು urbanization ಕಡೆಗೆ ಹೋಗುತ್ತಿದ್ದೇವೆ. ಕೈಗಾರಿಕಾ ಕ್ರಾಂತಿಯ ನಂತರ ಈಗ ನಗರೀಕರಣದ ಛಾಯೆ ಹಬ್ಬಿಕೊಂಡಿದೆ. ಅದರಿಂದ, ಗ್ರಾಮೀಣ ಪರಿಸರಗಳು ಹೇಗೆ ಹಾಳಾಗುತ್ತಿವೆ ಎಂದು ಮತ್ತು ನಗರೀಕರಣದಿಂದ ನಗರಗಳಲ್ಲಿ ಯಾವ ಸಮಸ್ಯೆಗಳು ಉದ್ಭವಾಗುತ್ತಿವೆ ಎಂದು ಮತ್ತು ಇದರಿಂದ ಎಂಥೆಂಥ ಸಾಮಾಜಿಕ ಪಿಡುಗುಗಳು ಉಂಟಾಗುತ್ತಿವೆ ಎಂಬ ಬಗ್ಗೆ ಕಾದಂಬರಿ ಬರೆದಿದ್ದಾರೆ. ನಗರೀಕರಣದಿಂದ ಆಗುತ್ತಿರುವ ವ್ಯತ್ಯಯಗಳು ಮತ್ತು ಪರಿಣಾಮಗಳ ಬಗ್ಗೆ ಶ್ರೀಯುತ ಯಶವಂತ ವಿಠೋಬ ಚಿತ್ತಾಲರವರು ಕನ್ನಡದ ಕಾದಂಬರಿಗಳನ್ನು ಬರೆದಿದ್ದಾರೆ. ಆದ್ದರಿಂದ, ಶ್ರೀಯುತರು ಬರೆದಿರುವ ಕಾದಂಬರಿಗಳನ್ನು ಸಾಹಿತಿಗಳು ಮತ್ತು ಸಾಹಿತ್ಯಾಸಕ್ತಿ ಉಳ್ಳವರು ಮಾತ್ರ ಓದತಕ್ಕಂಥದಲ್ಲ. ನಮ್ಮಂಥ ಸಾರ್ವಜನಿಕ ಬದುಕಿನ ರಾಜಕಾರಣಿಗಳು ಸಹ ನಗರೀಕರಣದ ಪರಿಣಾಮಗಳ ಬಗ್ಗೆ ತಿಳಿದುಕೊಳ್ಳಬೇಕಾದರೆ, ಮಾನ್ಯ ಯಶವಂತ ವಿಠೋಬ ಚಿತ್ತಾಲರವರ ಕಾದಂಬರಿಗಳನ್ನು ಓದುವುದು ಒಳ್ಳೆಯದೆಂದು ನನಗೆ ಅನಿಸುತ್ತದೆ. ಅಂಥ ಒಬ್ಬ ಒಳ್ಳೆಯ ಕಾದಂಬರಿಗಾರರನ್ನು ಇವತ್ತಿನ ದಿನ ನಾವು ಕಳೆದುಕೊಂಡಿದ್ದೇವೆ. ಒಟ್ಟಿನಲ್ಲಿ ಈ 11 ಜನರು ಕೂಡ ತಮ್ಮ ತಮ್ಮ ಕ್ಷೇತ್ರಗಳಲ್ಲಿ ನಮಗೆ ಉತ್ತಮವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಹಾಗೆಯೇ, ಸ್ಮರಣೆಗೆ ಅತ್ಯಂತ ಯೋಗ್ಯರಾಗಿರುವಂಥವರಾಗಿದ್ದು, ಇವರೆಲ್ಲರ ಆತ್ಮಕ್ಕೆ ಕೂಡ ನಮ್ಮ ಪಕ್ಷದ ಪರವಾಗಿ ಮತ್ತು ನಮ್ಮೆಲ್ಲ ಮಾನ್ಯ ಶಾಸಕ ಮಿತ್ರರ ಪರವಾಗಿ ನಾನು ಶಾಂತಿ ಕೋರುತ್ತೇನೆ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಸೂಚಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಈ ಸಂದರ್ಭದಲ್ಲಿ ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಲಾಯಿತು)

ಅಧ್ಯಕ್ಷರು : ಸ್ವೀಕೃತವಾದ ಸೂಚನೆಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುತ್ತದೆ. ಈಗ ಪ್ರಶ್ನೋತ್ತರ ವೇಳೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಸಭಾಧ್ಯಕ್ಷರೆ, ನಾವು ನಿಲುವಳಿ ಸೂಚನೆಯ ಬಗ್ಗೆ ಕೊಟ್ಟಿದ್ದೇವೆ. ಕಬ್ಬು ಬೆಳೆಗಾರರಲ್ಲಿ ಉದ್ಭವವಾಗಿರುವ ಸಮಸ್ಯೆಗಳ ಬಗ್ಗೆ ಇವತ್ತಿಗೂ ಕೂಡ ಸರ್ಕಾರ ಸ್ಪಂದನೆ ಮಾಡಿಲ್ಲ. ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಅಧಿವೇಶನದಲ್ಲಿ

ಈ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಪ್ರಸ್ತಾಪ ಮಾಡಲಾಗಿತ್ತು. ಅನಂತರ ಮತ್ತೊಂದು ಅಧಿವೇಶನ ಬೆಂಗಳೂರಿನಲ್ಲಿ ಸಹ ನಡೆಯಿತು...

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೇ, ಒಂದು ವಿಷಯ ಏನೆಂದರೆ, ಬೇಡಿಕೆಗಳ ಮೇಲೆ ಬಹಳ ವಿಸ್ತೃತವಾಗಿ ಚರ್ಚೆ ಮಾಡುತ್ತೇವೆ. ಆದ್ದರಿಂದ, ಆ ಸಂದರ್ಭದಲ್ಲಿ ಮಾತನಾಡಬಹುದು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸಭಾಧ್ಯಕ್ಷರೆ, ಈ ವಿಷಯವನ್ನು ಬೇಡಿಕೆಗಳ ಮೇಲೆ ಚರ್ಚೆ ಮಾಡತಕ್ಕಂಥದಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಒಂದು ತಿಂಗಳು ಅಧಿವೇಶನ ಇರುತ್ತದೆ. ಇಲಾಖಾವಾರು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ನಾವೆಲ್ಲರೂ ಭಾಗವಹಿಸುತ್ತೇವೆ. ಕೆಲವೊಂದು ಮುಖ್ಯವಾದ ವಿಚಾರಗಳನ್ನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಿ ಚರ್ಚೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಕಬ್ಬು ಬೆಳೆಗಾರರು ಹೋರಾಟ ಮಾಡುತ್ತಿದ್ದಾರೆ. ಹಾಗೆಯೇ ಬಿಜಾಪುರದಲ್ಲಿ ಅಹೋರಾತ್ರಿ ಧರಣಿ ಸಹ ಕುಳಿತುಕೊಂಡಿದ್ದಾರೆ. ಇವತ್ತಿನವರೆಗೂ ಸಕ್ಕರೆ ಕಾರ್ಖಾನೆಯ ಮಾಲೀಕರು ಅವರಿಗೆ ಹಣ ಕೊಟ್ಟಿಲ್ಲ. ಒಂದು ಟನ್ ಕಬ್ಬಿಗೆ 2650 ರೂಪಾಯಿ ಕೊಡಲಾಗುತ್ತದೆಂದು ಸರ್ಕಾರ promise ಮಾಡಿತ್ತು. ಆದ್ದರಿಂದ, ಎಷ್ಟು ಜನ ರೈತರಿಗೆ ಸಕ್ಕರೆ ಕಾರ್ಖಾನೆಯ ಮಾಲೀಕರು 2650 ರೂಪಾಯಿ ಕೊಟ್ಟಿದ್ದಾರೆಂದು ಸರ್ಕಾರ ಈ ಸಂದರ್ಭದಲ್ಲಿ ಹೇಳಬೇಕು. ಆದ್ದರಿಂದ, ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಈ ವಿಷಯವನ್ನು ದಯವಿಟ್ಟು ತೆಗೆದುಕೊಳ್ಳಬೇಕು.

ಶ್ರೀ ಗೋವಿಂದ ಎಂ.ಕಾರಜೋಳ : ಇದು ಅತ್ಯಂತ ಮಹತ್ವವಾದ ವಿಚಾರವಾಗಿರುವುದರಿಂದ ಇದನ್ನು ದಯವಿಟ್ಟು ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ರೈತರು ಹೊರಗಡೆ ಹೋರಾಟ ಮಾಡುತ್ತಿದ್ದಾರೆ. (ಗೊಂದಲ) ಬೆಳಗಾವಿಯಲ್ಲಿ ಒಬ್ಬ ರೈತ ವಿಷ ಸೇವನೆ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಹ ಈ ಸರ್ಕಾರಕ್ಕೆ ಇದುವರೆಗೂ ಬುದ್ಧಿ ಬಂದಿಲ್ಲ. ಈ ಬಗ್ಗೆ ಸರ್ಕಾರ ನಿಶ್ಕ್ರಿಯವಾಗಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ನಾವು ಕೂಡ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಕೇಂದ್ರ ಸರ್ಕಾರ ಕಬ್ಬು ಬೆಳೆಗೆ ನಿಗದಿ ಮಾಡಿರುವ ಬೆಂಬಲ ಬೆಲೆಯನ್ನು ಸಹ ಇವರು ಕೊಡಿಸಿಲ್ಲ. ರಾಜ್ಯ ಸರ್ಕಾರ ಎಸ್ಎಪಿ ಕಾನೂನು ಪ್ರಕಾರ ನಿಗದಿ ಮಾಡಿದ ಹಣ ಕೂಡ ಬರಲಿಲ್ಲ. ಕೆಲವು ಸಕ್ಕರೆ ಕಾರ್ಖಾನೆಗಳು ಒಂದು ಟನ್ ಕಬ್ಬಿಗೆ 1,200 ಮತ್ತು

1,800 ರೂಪಾಯಿ ಕೊಡುತ್ತಿದ್ದಾರೆ, ಆದರೆ, ಸರ್ಕಾರ ಮಾತ್ರ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದೆ. ಏತಕ್ಕೆ ಆಸಕ್ತಿ ವಹಿಸುತ್ತಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಹ ಈ ಸರ್ಕಾರ ರೈತರ ಸಮಸ್ಯೆಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರು : ಸರ್ಕಾರದಲ್ಲಿರುವ ಮಂತ್ರಿಗಳು ಆ ಸರ್ಕಾರಿ ಆಜ್ಞೆಯನ್ನು implement ಮಾಡಬಹುದಾಗಿತ್ತು. ಅವರು ಕೂಡ ಮಾಡಲಿಲ್ಲ. ಅವರೂ ಕೂಡ ಸಚಿವರಾಗಿ ಮುಂದುವರೆದಿದ್ದಾರೆ. Atleast ಆ ಸಚಿವರಾದರೂ implement ಮಾಡಬಹುದಾಗಿತ್ತು, ಆ ಸಚಿವರು ಮಾಲೀಕರಿದ್ದಾರೆ ಅವರು implement ಮಾಡಿಲ್ಲ.....

ಶ್ರೀ ಜಗದೀಶ್ ಶೆಟ್ಟರ್ : ಅವರೂ ಕೂಡ ಏನು ಮಾಡಲಿಲ್ಲ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : Preliminary submission ಮಾಡುವಾಗ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಆಗಲ್ಲ.

ಅಧ್ಯಕ್ಷರು : ಇವತ್ತೇ ಚರ್ಚೆ ಮಾಡೋಣ.

ಶ್ರೀ ಟಿ.ಬಿ.ಜಯಚಂದ್ರ : ನಿಯಮ 60ರಲ್ಲಿ ತಂದಿರುವಂತಹ ಸೂಚನೆಯು ಅದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಬೇಕು.

ಅಧ್ಯಕ್ಷರು : ಇದಕ್ಕೆ ಸೂಕ್ತವಾದ ಉತ್ತರವನ್ನು ಸರ್ಕಾರದಿಂದ ಕೊಡಿಸುವಂತಹ ಪ್ರಯತ್ನ ಮಾಡೋಣ.

(ಗೊಂದಲ)

ಅಧ್ಯಕ್ಷರು : ಇವತ್ತೇ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರಕ್ಕೆ ಕಬ್ಬು ಬೆಳೆಗಾರರ ಬಗ್ಗೆ ಕಾಳಜಿ ಇದ್ದಿದ್ದರೆ ಅವರೇ ಪ್ರಶ್ನೋತ್ತರವನ್ನು ಮುಂದೂಡಿದ್ದೇವೆಂದು ಹೇಳಲಿ. ಇಲ್ಲಿ ಪ್ರಶ್ನೋತ್ತರವನ್ನು ಮುಂದೂಡಿ ಇದಕ್ಕೆ ಅವಕಾಶವನ್ನು ಕೊಡಿ, ನಿಮ್ಮ ಪ್ರಾಮಾಣಿಕವಾದಂತಹ ಕಾಳಜಿಯನ್ನು ತೋರಿಸಿ.

ಅಧ್ಯಕ್ಷರು : ಮಾನ್ಯ ಕಾಗೇರಿಯವರೇ, ಇವತ್ತೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪ್ರಶ್ನೋತ್ತರವನ್ನು ಮುಂದೂಡಲಿ. ಇಂತಹ ಗಂಭೀರವಾದಂತಹ ವಿಷಯ ಇರುವಾಗ ಪ್ರಶ್ನೋತ್ತರವನ್ನು ಮುಂದೂಡಿ.

ಶ್ರೀ ಗೋವಿಂದ ಎಂ.ಕಾರಜೋಳ : ಇದನ್ನು first ಕೈಗೆತ್ತಿಕೊಳ್ಳಬೇಕು.

ಶ್ರೀ ವೈ.ಎಸ್.ವಿ.ದತ್ತ : ಸರ್ಕಾರ ಕಬ್ಬು ಬೆಳೆಗಾರರ ಪರವಾಗಿದ್ದರೆ ಎಷ್ಟು ಜನ ಸಕ್ಕರೆ ಕಾರ್ಖಾನೆ ಮಾಲೀಕರ ಮೇಲೆ ಕ್ರಮ ಕೈಗೊಂಡಿದ್ದೀರಿ.?

ಅಧ್ಯಕ್ಷರು : ಇವತ್ತೆ ಈ ಬಗ್ಗೆ ಚರ್ಚೆ ಮಾಡಿ ಉತ್ತರ ಪಡೆಯೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, question hour ಮುಗಿದ ತಕ್ಷಣ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು, ಖಂಡಿತವಾಗಿ ತೆಗೆದುಕೊಳ್ಳೋಣ. ಅದು ಜರೂರು ಪ್ರಶ್ನೆಯಾಗಿ ಅಗತ್ಯವಾಗಿ ತೆಗೆದುಕೊಳ್ಳೋಣ. ಅದರಲ್ಲಿ ಏನು ಅನುಮಾನವಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅವರು ನಿಲುವಳಿ ಸೂಚನೆಯ ಮೂಲಕ ತೆಗೆದುಕೊಂಡು ಬಂದಿದ್ದಾರೆ. ಸರ್ಕಾರ ಈ ಬಗ್ಗೆ ಚರ್ಚೆ ಮಾಡುವ ಸಂಬಂಧ ಹಿಂದೆ ಹೋಗುವುದಿಲ್ಲ. ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರ ಕಬ್ಬು ಬೆಳೆಗಾರರಿಗೆ ಕಾರ್ಖಾನೆಯ ಮಾಲೀಕರಿಂದ ಹಣ ಕೊಡಿಸುವ ಬಗ್ಗೆ ಏನೇನು ಮಾಡಿದೆ ಸರ್ಕಾರವು ಈ ಬಗ್ಗೆ ದೀರ್ಘವಾಗಿ ಹೇಳಿಕೆಯನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಆದರೆ ಈ ಬಗ್ಗೆ ಆರೋಪ ಮಾಡುವುದು ಸರಿಯಲ್ಲ. ಸರ್ಕಾರವು ಆ ಕಾರ್ಖಾನೆಯ ಮಾಲೀಕರ ಜೊತೆಯಲ್ಲಿ ಶಾಮೀಲಾಗಿದ್ದೇವೆ ಎಂದು ಆ ತರಹ ಮಾತನಾಡುವುದು ಸರಿಯಲ್ಲ. ನಾವು ಪ್ರಾಮಾಣಿಕವಾಗಿ ಕಬ್ಬು ಬೆಳೆಗಾರರಿಗೆ ...ಯಾವುದಾದರೂ ರಾಜ್ಯದಲ್ಲಿ ಒಂದು ಟನ್ನು ಕಬ್ಬಿಗೆ 250 ರೂಪಾಯಿಗಳಂತೆ ಸರ್ಕಾರದಿಂದ ಹಣ ಕೊಟ್ಟಿರುವುದು ಇದೆಯೇ ? ದತ್ತಾರವರೆ, ಯಾವುದಾದರೂ ನಿರ್ದೇಶನಗಳು ಇದ್ದರೆ ಹೇಳುತ್ತೀರಾ ? ನಾವು ರೈತರ ಬಗ್ಗೆ ಕಾಳಜಿ ಇಲ್ಲದೆ ಇದ್ದರೆ ಇದನ್ನು ಮಾಡುವುದಕ್ಕೆ ಹೋಗುತ್ತಿದ್ದೇವಾ ? ಈಗ question hour ಆಗಲಿ, ಮಾನ್ಯ ಅಧ್ಯಕ್ಷರೆ ಅವರು ನಿಲುವಳಿ ಸೂಚನೆ ಏನು ತಂದಿದ್ದಾರೆ ಅದನ್ನು ತಾವು ರೂಲ್ 69 ಗೆ convert ಮಾಡಿ. ಅವರು ಈ ಬಗ್ಗೆ ಚರ್ಚೆ ಮಾಡಲಿ, ನಾವು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ. ಅದನ್ನು ನಾವು ನಿಮಗೆ ಬಿಟ್ಟಿದ್ದೇವೆ. ಅದನ್ನು ಬಿಟ್ಟು ನೀವು ಸುಮ್ಮನೆ ಆರೋಪಗಳನ್ನು ಮಾಡುವುದು ಸರಿಯಲ್ಲ. ನಾವು ಹೇಳಬಹುದು, ಆದರೆ ಆ ರೀತಿಯಾಗಿ ಆರೋಪಗಳನ್ನು ಮಾಡುವುದಕ್ಕಾಗುತ್ತದೆಯೇ ? ಈ ರೀತಿಯಾಗಿ ಮಾಡಬಾರದು.

ಅಧ್ಯಕ್ಷರು : O.K. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಶ್ರೀಮಾನ್ ಪಿ.ರಾಜೀವರ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಪಿ.ರಾಜೀವ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು mention ಮಾಡಿರುವಂತಹ ಹಳ್ಳಿಗಳು ಹಿನ್ನೀರಿನಿಂದ ಮತ್ತು ಅಣೆಕಟ್ಟಿನಿಂದ ಮುಳುಗಡೆಯಾಗಿತ್ತು ಎಂದು ಘೋಷಣೆ ಮಾಡಿರುವಂತಹ ಹಳ್ಳಿಗಳು. ಆ ಹಳ್ಳಿಗಳನ್ನು ಕೈಬಿಟ್ಟಿದ್ದಾರೆ. ಮುಳುಗಡೆ ಪ್ರದೇಶಗಳೆಂದು ಅವು ಘೋಷಣೆಯಾಗಿಲ್ಲ. ಆ ಹಳ್ಳಿಗಳು ಪ್ರತಿ ವರ್ಷವು ನೀರಿನಿಂದ ಮುಳುಗಡೆಯಾಗುತ್ತಿದೆ, ವಿಶೇಷವಾಗಿ ಅಲ್ಲಿ ನದಿತೀರದಲ್ಲಿರುವಂತಹ ದಲಿತ ಕುಟುಂಬಗಳು ಮೊದಲು ಅವರು ತುತ್ತಾಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರವು ಗಂಭೀರವಾಗಿ ಪರಿಗಣಿಸಿ ಶಾಶ್ವತವಾದಂತಹ ಪರಿಹಾರವನ್ನು ಕೊಡಬೇಕು. ಆದಷ್ಟು ಬೇಗನೆ ಅಲ್ಲಿ ತಡೆಗೋಡೆ ನಿರ್ಮಾಣ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕುಡಚಿ ಕ್ಷೇತ್ರದಲ್ಲಿ ಪ್ರವಾಹದಿಂದ ಹಾನಿಯಾಗುವಂತಹ ಬಹಳ ಗ್ರಾಮಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ತಡೆಗೋಡೆ ಮಾಡಬೇಕೆಂಬುವುದರ ಬಗ್ಗೆ ಅವರು ಮನವಿಯನ್ನು ಕೂಡ ಸಲ್ಲಿಸಿದ್ದಾರೆ. ನಮ್ಮಲ್ಲಿ ಸದ್ಯಕ್ಕೆ ಆ ತರಹದ ಪ್ರಸ್ತಾವನೆ ಇಲ್ಲ. ಆದರೂ ಕೂಡ ತಡೆಗೋಡೆಯನ್ನು ಮಾಡಬೇಕು ಆದರೆ ಇದೊಂದೆ ಅಲ್ಲ. ಪ್ರವಾಹ ಬಂದಾಗ ಬೇರೆಬೇರೆ ರೀತಿಯಲ್ಲಿ ಬಹಳಷ್ಟು damageಗಳು ಆಗುತ್ತವೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ತಾಂತ್ರಿಕ ವರದಿಯನ್ನು ಪಡೆದು ಇದನ್ನು ಮಾಡುವುದರ ಬಗ್ಗೆ ಪರಿಶೀಲಿನೆಯಲ್ಲಿದೆ. ಅದರಲ್ಲೂ ವಿಶೇಷವಾಗಿ ಈ ವರ್ಷದಲ್ಲಿ ನಾವು ಒಂದು mitigation fund ಎಂದು ಏನಿದೆ, ವಿಪತ್ತು ಉಪಶಮನಕ್ಕೆ ಸುಮಾರು 75 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆಯನ್ನು ನಾವು ಖಂಡಿತವಾಗಿ ಮಾಡುತ್ತೇವೆ. ಜಿಲ್ಲಾಧಿಕಾರಿಗಳಿಂದ ತಾಂತ್ರಿಕ ವರದಿ ಬಂದ ನಂತರ ಪರಿಶೀಲನೆ ಮಾಡಿ ಮಾಡಿಕೊಡುತ್ತೇವೆ.

ಅಧ್ಯಕ್ಷರು : O,K. ಶ್ರೀಮಾನ್ ನಾರಾಯಣಸ್ವಾಮಿಯವರೆ ತಾವು ಪ್ರಶ್ನೆಯನ್ನು ಕೇಳಿ. ಪ್ರಶ್ನೆ ಸಂಖ್ಯೆ–56 ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.

ಶ್ರೀ ನಾರಾಯಣಸ್ವಾಮಿ ಎಸ್.ಎನ್. : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2013–14ನೇ ಸಾಲಿಗೆ ಅನುಷ್ಠಾನಕ್ಕೆ ತರುತ್ತೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಆದರೆ ಯಾವಾಗ ತರುತ್ತೀರಿ ಎನ್ನುವುದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ. ಅವರು ಕೊಟ್ಟಿರುವ ಉತ್ತರದಲ್ಲಿ 4ಕ್ಕೆ ತಂತಿ ಬೇಲಿ ನಿರ್ಮಾಣ ಮಾಡುವುದಕ್ಕೆ ಶೇಕಡಾ 50ರ ಅನುಪಾತದಲ್ಲಿ ರೈತರು ಒಟ್ಟಿಗೆ ಮಾಡುತ್ತೇನ್ನುವಂತಹ ಮಾತನ್ನು

ಹೇಳಿದ್ದಾರೆ. ಆದರೆ ಯಾವಾಗ ಮಾಡುತ್ತಾರೆ ಅದಕ್ಕಾಗಿ ತಾವು ಕಾಲಮಿತಿಯನ್ನು ಸೂಚಿಸಬೇಕೆಂದು ನಾನು ಮವವಿ ಮಾಡುತ್ತೇನೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಸಭಾಧ್ಯಕ್ಷರೆ, ಕಳೆದ ಸದನದಲ್ಲಿ ನಮ್ಮ ಬಜೆಟ್ ಘೋಷಣೆಯಾದಂತಹ ಸಂದರ್ಭದಲ್ಲಿ ರೈತರು ಅವರವರ ಕೃಷಿ ಮಾಡತಕ್ಕಂತಹ ಜಮೀನಿನಲ್ಲಿ ಈ ಸೋಲಾರ್ ಫೆನ್ಸಿಂಗ್ ಹಾಕುವುದಕ್ಕೆ 50:50 ಅಂದರೆ ಶೇಕಡ 50 ರಷ್ಟನ್ನು ಸರ್ಕಾರ ಸಬ್ಸಿಡಿಯನ್ನು ಕೊಡುವಂತಹ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಈಗಾಗಲೇ ಅನುಮಿತಿಯಾಗಿದೆ. ಆದಷ್ಟು ಶೀಘ್ರದಲ್ಲಿ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : O,K.

ಶ್ರೀ ನಾರಾಯಣಸ್ವಾಮಿ ಎಸ್.ಎನ್. : ವರ್ಷಕ್ಕೆ ಮೂರು ಬಾರಿ ಆನೆಯಿಂದ ದಾಳಿಯಾಗುತ್ತಿದೆ. ಅಲ್ಲಿರುವಂತಹ ಜನರು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಸನ್ಮಾನ್ಯ ಸಚಿವರು ಈ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆದಷ್ಟು ಬೇಗನೆ ಮಾಡಿಕೊಡುತ್ತೇನೆಂದು ಸಚಿವರು ಹೇಳಿದ್ದಾರಲ್ಲಾ.

ಶ್ರೀ ಬಿ.ರಮಾನಾಥ ರೈ : ನಾವು ಇದನ್ನು ಮಾಡಿಕೊಡುವ ಬಗ್ಗೆ ಕಳೆದ ಬಜೆಟ್‌ನಲ್ಲಿಯೇ ಒಪ್ಪಿಕೊಂಡಿದ್ದೇವೆ. ಇದನ್ನು ಮಾಡಿಕೊಡುತ್ತೇವೆ.

ಅಧ್ಯಕ್ಷರು : ಆಯಿತು

ಶ್ರೀ ನಾರಾಯಣಸ್ವಾಮಿ ಎಸ್.ಎನ್: ಮಾನ್ಯ ಅಧ್ಯಕ್ಷರೆ, ನಾನು ಅದೇ question ಅನ್ನು ಮುಂದುವರಿಸುತ್ತಿದ್ದೇನೆ.

ಶ್ರೀ ಸಿ.ಟಿ.ರವಿ : ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವು ನಿರ್ದಿಷ್ಟವಾದಂತಹ ದಿನಾಂಕ ಆಗುವುದಿಲ್ಲ. ಗಂಟೆಯೋ, ತಿಂಗಳೋ, ವರ್ಷವೋ 5 ಅಥವಾ 10 ವರ್ಷ ಎಂದಾದರೂ ಹೇಳಬೇಕಲ್ಲವೇ ? ಆದಷ್ಟು ಬೇಗನೆ ಎಂದು ಅವರ ಮನಸ್ಸಿನಲ್ಲಿರುವಂತಹ ಕಲ್ಪನೆ ಇರಬಹುದು. ಇದು ಸದನಕ್ಕೆ ಗೊತ್ತಾಗಬೇಕಲ್ಲವೇ ?

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, ಮಾನ್ಯ ಸದಸ್ಯರುಗಳಿಗಿರುವಂತಹ ಆತಂಕ ಏನೆಂದರೆ, ಆನೆಗಳು ತುಂಬಾ ತೊಂದರೆಯನ್ನು ಕೊಡುತ್ತಿದೆ, ಆದಷ್ಟು ಬೇಗನೆ ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಈ ಬಗ್ಗೆ ಮೂರು ತಿಂಗಳೋ, ಆರು ತಿಂಗಳೋ ಎಂದು ಏನಾದರೂ ಹೇಳಿದರೆ ಅನುಕೂಲವಾಗುತ್ತದೆ.

ಶ್ರೀ ಬಿ.ರಮಾನಾಥ ರೈ : ಈಗಾಗಲೇ ಈ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೇವೆ. ಅದನ್ನು ನಾವು ಅನುಷ್ಠಾನಕ್ಕೆ ತರುತ್ತೇವೆ.

ಶ್ರೀ ಕೆ.ಎಸ್.ಮಂಜುನಾಥ ಗೌಡ : ಮಾನ್ಯ ಸಚಿವರು ಸೋಲಾರ್ ಫೆನ್ಸಿಂಗ್ ಮತ್ತು ಸಬ್ಸಿಡಿಯ ಬಗ್ಗೆ ಹೇಳುತ್ತಿದ್ದಾರೆ. ಅಲ್ಲಿ ಯಾವಾಗಲೂ ಆನೆ ಬರುವುದಿಲ್ಲ. ಮೂರು-ನಾಲ್ಕು ತಿಂಗಳಿಗೆ ಒಂದು ಸಾರಿ ಆನೆ ಬಂದು ದಾಳಿ ಮಾಡುತ್ತದೆ. ಅಲ್ಲಿ trenching ಹಾಕಬೇಕು. ಅಲ್ಲಿ ಆನೆಕಾರಿಡಾರ್ ಎಂದು declare ಮಾಡಿ ಅಲ್ಲಿ trenching ಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ತಾವು trenching ಆಗಬೇಕೆಂದು ಹೇಳುತ್ತಿದ್ದೀರಾ ?

ಶ್ರೀ ಕೆ.ಎಸ್.ಮಂಜುನಾಥ ಗೌಡ : ಅದನ್ನು ಇವರು ಮಾಡಲಿಲ್ಲ.

ಶ್ರೀ ಬಿ.ರಮಾನಾಥ ರೈ : ಅದನ್ನು ನಿರ್ಮಾಣ ಮಾಡುವುದಕ್ಕೆ 212 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ನಾವು ಘೋಷಣೆಯನ್ನು ಮಾಡಿದ್ದೇವೆ. ಈಗಾಗಲೇ ಅನೇಕ ಕಡೆಗಳಲ್ಲಿ ಆನೆ ಕಂದಕ ನಿರ್ಮಾಣ ಮಾಡತಕ್ಕಂತಹ ಕೆಲಸವು ಆಗಿದೆ. ನಾವು ಹಳೆಯ ರೈಲುಕಂಬಿಯನ್ನು ಹಾಕಿ ಮುಚ್ಚಬೇಕೆಂಬ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈಗಾಗಲೇ ನಾಗರಹೊಳೆಯಲ್ಲಿ ಪ್ರಾಯೋಗಿಕವಾಗಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ನಾರಾಯಣಸ್ವಾಮಿ ಎಸ್.ಎನ್. : ನಾವು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಮಾಲೂರಿನ ಬಗ್ಗೆ ನಾವು ಹೇಳುತ್ತಿರುವುದು. ನಾಗರಹೊಳೆಯದ್ದನ್ನು ಕೇಳಲಿಲ್ಲ.

ಶ್ರೀ ಕೆ.ಎಸ್.ಮಂಜುನಾಥ ಗೌಡ : ನಮ್ಮಲ್ಲಿ ಆರು ಜನರು ಆನೆ ದಾಳಿಗೆ ತುತ್ತಾಗಿ ತೀರಿಕೊಂಡಿದ್ದಾರೆ.

ಅಧ್ಯಕ್ಷರು : ಆಯಿತು

ಶ್ರೀ ಬಿ.ರಮಾನಾಥ ರೈ : ನಾವು ಈ ಸಾರಿ ಇದಕ್ಕಾಗಿ ದುಡ್ಡನ್ನು ಇಟ್ಟಿರುವುದು ಪ್ರಥಮವಾಗಿದೆ.

ಶ್ರೀ ನಾರಾಯಣಸ್ವಾಮಿ ಎಸ್.ಎನ್ : ನಾವು ಕೋಲಾರ ಜಿಲ್ಲೆಗೆ separate ಸೀಮಿತವಾಗಿ ಎಷ್ಟು ಇಟ್ಟಿದ್ದಾರೆಂದು ಕೇಳುತ್ತಿರುವುದು.

ಶ್ರೀ ಬಿ.ರಮಾನಾಥ ರೈ : ರಾಜ್ಯದ ಎಲ್ಲಾ ಭಾಗದಲ್ಲಿಯೂ ಸಮಸ್ಯೆಯು ಕೂಡ ಇವೆ. ಇದು ಕೇವಲ ಒಂದೇ ಪ್ರದೇಶಕ್ಕೆ ಸೀಮಿತವಾಗಿಲ್ಲ. ಅನೇಕ ಕಡೆಗಳಲ್ಲಿಯೂ ಸಮಸ್ಯೆ ಇದೆ. ಆನೆಗಳ ಸಂಖ್ಯೆಗಳು ಕೂಡ ಜಾಸ್ತಿಯಾಗಿದೆ. ಆನೆಗಳ ವಾಸಸ್ಥಾನದಲ್ಲಿ ಸ್ವಲ್ಪ ಅತಕ್ರಮಣ, ಬೇರೆಬೇರೆ ಕಾರಣಗಳು ಸಹ ಇವೆ. ಬೇರೆ ಬೇರೆ ಕಾರಣಗಳಿಂದಾಗಿ ಅಲ್ಲಿ ಬೇಕಾಗಿರುವಂತಹ food ಇಲ್ಲದೆ ಇರತಕ್ಕಂತಹುದು ಇದೆ. ಅದಕ್ಕಾಗಿ ನಾವು ವನ್ಯಜೀವಿಯನ್ನು ಸಂರಕ್ಷಣೆ ಮಾಡಬೇಕು. ಮನುಷ್ಯ ಮತ್ತು ಪ್ರಾಣಿಯ ಸಂಘರ್ಷವು ಸಾಮಾನ್ಯವಾಗಿ ಬಿಟ್ಟಿದೆ. ಈ ಬಗ್ಗೆ ನಮ್ಮ ಇಲಾಖೆಯು ಸಾಧ್ಯವಾದ ಮಟ್ಟಿಗೆ ನಿಯಂತ್ರಣ

ಮಾಡುವುದಕ್ಕೆ ಆನೆಗಳನ್ನು ಹಿಮ್ಮೆಟ್ಟಿಸುವುದಕ್ಕೆ rapid force ಉಪಯೋಗ ಮಾಡಿಕೊಂಡು ಮಾಡುತ್ತೇವೆ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಬೆಳೆ ಪರಿಹಾರ ಕೊಡುತ್ತೇವೆ ಎಂದು ಮಾನ್ಯ ಸಚಿವರು ಘೋಷಣೆ ಮಾಡಿದ್ದಾರೆ. ಅವರು ಕೊಡುತ್ತಿರುವಂತಹ ಪರಿಹಾರ ಸಾಕಾಗುತ್ತಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಮೇಲುಕೋಟೆ) : ಮಾನ್ಯ ಅಧ್ಯಕ್ಷರೆ, ಪ್ರಾಣಿಗಳು ಊರಿನೊಳಗೆ ಏಕೆ ಬರುತ್ತಿದ್ದವು ? ಮಂಡ್ಯದ ಎಲ್ಲಾ ಕಡೆ ಚಿರತೆಗಳು ಬಂದಿವೆ. ಇಲ್ಲಿ ಆನೆಗಳು ಬರುತ್ತಿವೆ. ಇದಕ್ಕೆ ಕಾರಣವೇನು ? ಕಾಡನ್ನು ಬಿಟ್ಟು ಪ್ರಾಣಿಗಳು ಊರಿಗೆ ಬರಬೇಕಾದರೆ ಯಾವ ಸೌಕರ್ಯದ ಕೊರತೆ ಇದೆ ? ಪ್ರಾಣಿಗಳು ಊರಿನ ಒಳಗೆ ಬರದೇ ಇರುವ ಹಾಗೆ ನೋಡಿಕೊಳ್ಳಲು ನೀವು Wild Life Act ಪ್ರಕಾರ ಕೆಲಸ ಮಾಡಬೇಕೇ ಹೊರತು ನಮ್ಮನ್ನು ನೀವು 50% ಕೊಟ್ಟು fencing ಹಾಕಿಕೊಳ್ಳಿ ನಾವು 50% ಕೊಡುತ್ತೇವೆ ಎಂದು ಹೇಳಿದರೆ ನಿಮ್ಮ ಊರಿನ ಆನೆ ನಮ್ಮ ಊರಿಗೆ ಬಂದರೆ ನೀವು ತಡೆದುಕೊಳ್ಳಬೇಕೇ ಹೊರತು 50% ಕೊಡಿ ಎಂದು ಹೇಳುವುದಲ್ಲ.

ಶ್ರೀ ಬಿ. ರಮಾನಾಥ ರೈ : ಸರ್ಕಾರವೇ solar fencing ಹಾಕುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಆ ಕೆಲಸದ ಕಾಮಗಾರಿಗಳ ಬಗ್ಗೆ ಸಾಮಾನ್ಯವಾಗಿ ಜನರಿಗೆ ಅಷ್ಟು ವಿಶ್ವಾಸವಿಲ್ಲದ ಸಂದರ್ಭದಲ್ಲಿ ರೈತರು ನಮ್ಮಲ್ಲಿ ಕೇಳಿಕೊಂಡರು, ನಾವು ಸಾಕಷ್ಟು ಗಟ್ಟಿಯಾಗಿ ಮಾಡುತ್ತೇವೆ. ಅದಕ್ಕಾಗಿ ಈ ಒಂದು ಅನುಕೂಲತೆಯನ್ನು ಮಾಡಿಕೊಟ್ಟರೆ ನಾವೇ ಮಾಡಿಕೊಳ್ಳುತ್ತೇವೆ ಎನ್ನುವ ಮಾತು ಬಂದಾಗ 50% ನಾವು ಕೊಡುವಂಥದ್ದನ್ನು ಮಾಡಿದ್ದೇವೆ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಬೆಳೆ ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಬೆಳೆ ಪರಿಹಾರವನ್ನು ನಾಮಕಾವಸ್ತೆಗೆ ಕೊಡುತ್ತಿದ್ದಾರೆ. ಆದರೆ ಅದಕ್ಕೆ ಎಷ್ಟು ಬೆಳೆ ನಷ್ಟವಾಗಿದೆ ಅಷ್ಟು ಪರಿಹಾರವನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ. ಸಸಿಗಳು ನಾಶವಾಗಿರುವುದಕ್ಕೆ ಕೇವಲ ಒಂದು ರೂಪಾಯಿ ಪರಿಹಾರವನ್ನು ನಿಗದಿ ಮಾಡಿದ್ದಾರೆ. ಒಂದು ರೂಪಾಯಿಯಲ್ಲಿ ಸಸಿಯನ್ನು ಬೆಳೆಸುವುದಕ್ಕೆ ಆಗುತ್ತದೆಯೇ ? ಆದ್ದರಿಂದ ಒಂದು ರೂಪಾಯಿಯನ್ನು ಹೆಚ್ಚಿಸಬೇಕೆಂದು ಮನವಿ ಮಾಡುತ್ತೇನೆ. ಅದೇ ರೀತಿ ಇವತ್ತು ಈ ಒಂದು ಯೋಜನೆಯಲ್ಲಿ ಸುಮಾರು 1,310 ಹೆಕ್ಟೇರ್ ನೆಡುತೋಪನ್ನು ನಿರ್ಮಾಣ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದು ಸಂಪೂರ್ಣ ಸುಳ್ಳು. ಅದು ಸತ್ಯಕ್ಕೆ ದೂರವಾದ ವಿಚಾರ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ: ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಸುಳ್ಳು ಮಾಹಿತಿಯೇ ಅಥವಾ ಇಲ್ಲವೇ ಎನ್ನುವುದನ್ನು ಮಾನ್ಯ ಸಚಿವರು ಹೇಳುವುದು.

ಶ್ರೀ ಬಿ.ರಮಾನಾಥ ರೈ : ಇದೊಂದು ಸಾಮಾನ್ಯವಾದಂತಹ ಮಾತು. ಇದಕ್ಕೆ ನೈಜತೆ ಇಲ್ಲ. ಸಂಪೂರ್ಣವಾಗಿ ಸಸಿಗಳನ್ನು ನೆಡುತ್ತಿಲ್ಲ, ಸಸಿಗಳು ಉಳಿಯುತ್ತಿಲ್ಲ ಎಂದು ಸಾರಾಸಗಟಾಗಿ ಹೇಳುವಂತಹ ಮಾತಲ್ಲ. ಆ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸಾಮಾನ್ಯವಾಗಿ ನಾನು ಸದನದಲ್ಲಿ ಶಾಸಕನಾಗಿ ಬಂದ ದಿವಸದಿಂದಲೂ ಈ ಮಾತನ್ನು ಕೇಳುತ್ತಿದ್ದೇನೆ. ಆದರೂ ಕೂಡ ಇವತ್ತು ಸಾಕಷ್ಟು ಸಸಿಗಳನ್ನು ನೆಟ್ಟು, ಅದನ್ನು ಉಳಿಸಿಕೊಳ್ಳುವಂತಹ ಬೇರೆ ಬೇರೆ ಕಾರ್ಯಕ್ರಮಗಳಿವೆ. ರೈತರು ಸಸಿ ನೆಟ್ಟರೆ ಅದಕ್ಕೆ ಪ್ರೋತ್ಸಾಹಧನವನ್ನು ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಮತ್ತು ಇಲಾಖೆ ಕೂಡ ಸಸಿ ನೆಟ್ಟು ಅದನ್ನು ಉಳಿಸುವಂತಹ ಕೆಲಸವನ್ನು ಮಾಡುತ್ತಿದೆ. ಸಾರಸಗಟಾಗಿ ಎಲ್ಲವೂ ಸರಿಯಲ್ಲ ಎಂದು ಹೇಳುವುದು ಒಂದು ಸಾಮಾನ್ಯವಾದಂತಹ ವಾದ. ಈ ರೀತಿ ನಾನು ಕೇಳುತ್ತಿರುವುದು ಹೊಸದೇನಲ್ಲ. ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಕೇಳುತ್ತಿರುವುದರಲ್ಲಿ ನೈಜತೆ ಇಲ್ಲವೆನ್ನುವುದು ನನ್ನ ಅಭಿಪ್ರಾಯ.

ಶ್ರೀ ಸಿ.ಟಿ.ರವಿ : ನಾಶವಾದ ಸಸಿಗೆ ಕೇವಲ ಒಂದು ರೂಪಾಯಿ ಬೆಳೆ ಪರಿಹಾರ ಕೊಡುತ್ತಿದ್ದಾರೆ.

ಶ್ರೀ ಬಿ.ರಮಾನಾಥ ರೈ : ಈಗ ಏನು ಬೆಳೆ ನಷ್ಟವಾಗಿದೆ, ನಷ್ಟವಾಗಿರುವ ಮೊತ್ತದ ಮಟ್ಟಿನಲ್ಲಿ ಪರಿಹಾರವನ್ನು ಕೊಡಬೇಕೆಂದು ಈಗಾಗಲೇ ಹಣಕಾಸು ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಆದಷ್ಟು ಶೀಘ್ರದಲ್ಲಿ ಅದಕ್ಕೆ ಒಪ್ಪಿಗೆಯನ್ನು ಪಡೆದುಕೊಳ್ಳಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ) : ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆಯವರು ಯಾವ ಪರಿಹಾರವಾಗಿದೆ ಎಂದು ಹೇಳುತ್ತಾರೋ ಅದಕ್ಕೆ ಪರಿಹಾರ ಕೊಡಬೇಕೆಂದು ಆಗಿತ್ತು.

ಅಧ್ಯಕ್ಷರು : ಆ ವಿಷಯ ಬೇಡ. ಇದು ಆನೆಗೆ ಸಂಬಂಧಪಟ್ಟ ವಿಷಯವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆನೆಗೆ ಸಂಬಂಧಪಟ್ಟ ವಿಷಯವನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಬೇಡಿಕೆಯ ಮೇಲೆ ಚರ್ಚೆ ಇದೆ. ಆಗ ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬೆಳೆ ಪರಿಹಾರ ಎಷ್ಟು ಕೊಡಬೇಕೆಂದು guidelines ನಲ್ಲಿ ಪರಿವರ್ತನೆ ಆಗಬೇಕಾಗಿದೆ. ಅದು ಹಣಕಾಸು ಇಲಾಖೆಯಲ್ಲಿಯೇ ಒಂದು ವರ್ಷದಿಂದ

ಉಳಿದಿದೆ. ಬೆಳೆ ಪರಿಹಾರ ಎಂದು ಒಂದು ರೂಪಾಯಿ, ಎರಡು ರೂಪಾಯಿ ಕೊಡುವುದಲ್ಲ. ಕೃಷಿ ಹಾಗೂ ತೋಟಗಾರಿಕೆ ಇಲಾಖೆಯಿಂದ analysis ಮಾಡಿಸಬೇಕು. ನಾನು ಬೆಳಗಾಂ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಕೊಡುತ್ತೇವೆ ಎಂದು ಹೇಳಿದ್ದರು, ಅದು ಇನ್ನೂ ಆಗಿಲ್ಲ. ಹಣಕಾಸು ಇಲಾಖೆಗೆ ಪ್ರಸ್ತಾವನೆ ಹೋಗಿ ಒಂದು ವರ್ಷವಾಯಿತು.

ಶ್ರೀ ಬಿ.ರಮಾನಾಥ ರೈ : ಎಷ್ಟು ಬೆಳೆ ನಷ್ಟವಾಗಿದೆ ಅದಕ್ಕೆ ಪರಿಹಾರ ಕೊಡಬೇಕೆಂದು ತೀರ್ಮಾನ ಮಾಡುವುದು ಸರ್ಕಾರದ್ದು. ಆದಷ್ಟು ಶೀಘ್ರದಲ್ಲಿಯೇ ಅದಕ್ಕೆ ಒಪ್ಪಿಗೆಯನ್ನು ಕೊಡಿಸುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಣಕಾಸು ಇಲಾಖೆ ನಮ್ಮ ವಿಧಾನಸೌಧದಲ್ಲಿಯೇ ಇದೆಯಲ್ಲಾ 6 ತಿಂಗಳು, ಒಂದು ವರ್ಷವಾದರೂ ಚರ್ಚೆಯಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಚರ್ಚೆಯನ್ನು ಈ ರೀತಿ ಮಾಡಿದರೆ ಆಗುತ್ತದೆಯೇ ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : file ಅನ್ನು clear ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಸಿ.ಟಿ.ರವಿ : ಹಣಕಾಸು ಇಲಾಖೆಗೆ "ಸಕಾಲ" ಅನುಷ್ಠಾನ ಮಾಡಿ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ ಸಾಕು. ಮಾನ್ಯ ಈಶ್ವರ ಖಂಡ್ರೆಯವರು ಪ್ರಶ್ನೆ ಕೇಳುವುದು.

ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ

03(45) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

(ಅ) ಬೀದರ್ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಯಾವ ದಿನಾಂಕದಂದು ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ವಿವರ ನೀಡುವುದು)

(ಆ) ಸರ್ಕಾರದಿಂದ ಅನುದಾನ ಬಿಡುಗಡೆಯಾದರೂ ಇನ್ನೂ ಅನೇಕ ಭೂ ಮಾಲೀಕರಿಗೆ ಪರಿಹಾರ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;